ಭೂಗೋಳ ಶಾಸ್ತ್ರ	01	--
ಇತಿಹಾಸ	01	--
ರಾಜ್ಯಶಾಸ್ತ್ರ	-	01
ಬೋಧಕೇತರರು :		
ಅಧೀಕ್ಷಕರು	01	--
ಪ್ರ.ದ.ಸಹಾಯಕರು	01	--
ದ್ವಿ.ದ.ಸಹಾಯಕರು	01	--
ಬೆರಳಚ್ಚುಗಾರರು	-	01
ಅಟೆಂಡರ್	01	02
ಪರಿಚಾರಕರು	--	01

ಇ) ಇಲಾಖೆಯ ವಿವಿಧ ವಿಷಯಗಳಲ್ಲಿ ಖಾಲಿ ಇರುವ 610 ಉಪನ್ಯಾಸಕರ ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಆಯ್ಕೆ ಪಟ್ಟಿ ಕಳುಹಿಸಿದ್ದು, ನೇಮಕಾತಿ ಪ್ರಕ್ರಿಯೆ ಮುಕ್ತಾಯ ಹಂತದಲ್ಲಿದೆ. ಅದೇ ರೀತಿ ಬೆರಳಚ್ಚುಗಾರರು, ಅಟೆಂಡರ್ ಹಾಗೂ ಪರಿಚಾರಕರ ಹುದ್ದೆಗಳನ್ನು ಸಹ ತುಂಬಲು ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ.

ಈ) ಈ ಮೇಲೆ (ಇ) ನಲ್ಲಿನ ಅಂಶಕ್ಕೆ ನೀಡಿರುವ ಮಾಹಿತಿ ಇದಕ್ಕೂ ಅನ್ವಯವಾಗುತ್ತದೆ.

563 (613) ಶ್ರೀ ಪಾಟೀಲ್ ಡಿ.ಆರ್. (ಗದಗ್) :- ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೃಹತ್ ನೀರಾವರಿ, ಮಧ್ಯಮ ನೀರಾವರಿ ಮತ್ತು ಸಣ್ಣ ನೀರಾವರಿ ಯೋಜನೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಮಾಡಿರುವ ವೆಚ್ಚ ಎಷ್ಟು;

ಆ) ರಾಜ್ಯದಲ್ಲಿ ನೀರಾವರಿ ಯೋಜನೆಗಳಿಂದ ಸೌಲಭ್ಯ ಪಡೆಯಬೇಕಾದ ಕ್ಷೇತ್ರ ಎಷ್ಟು;

ಇ) ಈಗ ಎಷ್ಟು ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ;

ಈ) ರಾಜ್ಯದ ಒಟ್ಟು ಕೃಷಿ ಯೋಗ್ಯ ಭೂಮಿಯಲ್ಲಿ ಶೇಕಡವಾರು ಎಷ್ಟಾಗುವುದು;

ಊ) ರಾಜ್ಯದಲ್ಲಿ ಅಂತರ್ಜಲ ಬಳಸಿ ಎಷ್ಟು ನೀರಾವರಿ ಸಾಧಿಸಲಾಗಿದೆ;

ಋ) ಇದಕ್ಕಾಗಿ ತೋಡಲಾಗಿರುವ ಕೊಳವೆ ಬಾವಿಗಳೆಷ್ಟು; ಈ ಪೈಕಿ ಬತ್ತಿರುವ ಕೊಳವೆ ಬಾವಿಗಳೆಷ್ಟು;

ಌ) ಕೊಳವೆ ಬಾವಿಗಳ ಮರುಪೂರಣಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) :

ಅ) ಬೃಹತ್ ನೀರಾವರಿ, ಮಧ್ಯಮ ನೀರಾವರಿ ಮತ್ತು ಸಣ್ಣ ನೀರಾವರಿ ಯೋಜನೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಮಾಡಿರುವ ವೆಚ್ಚ ಈ ಕೆಳಗಿನಂತಿದೆ:

ಇಲಾಖೆ	ವೆಚ್ಚ (ರೂ.ಕೋಟಿಗಳಲ್ಲಿ)		
	2004–05	**2005–06**	**2006–07**
ಭಾರಿ ಮತ್ತು ಮಧ್ಯಮ	1305.58	1696.29	2106.86
ಸಣ್ಣ ನೀರಾವರಿ	109.57	101.53	308.68
ಒಟ್ಟು	**1415.15**	**1797.82**	**2415.54**

ಆ) 2002ರ ರಾಜ್ಯ ಜಲ ನೀತಿಯಂತೆ, ರಾಜ್ಯದಲ್ಲಿ ನೀರಾವರಿ ಯೋಜನೆಗಳಿಂದ ಸೌಲಭ್ಯ ಪಡೆಯಬೇಕಾದ ಒಟ್ಟು ಕ್ಷೇತ್ರ 61 ಲಕ್ಷ ಹೆಕ್ಟೇರ್‌ಗಳಾಗಿರುತ್ತದೆ. ಇದರ ವಿಂಗಡಣೆ ಈ ಕೆಳಗಿನಂತಿದೆ:

ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಂದ	35 ಲಕ್ಷ ಹೆಕ್ಟೇರುಗಳು
ಸಣ್ಣ ನೀರಾವರಿ	10 ಲಕ್ಷ ಹೆಕ್ಟೇರುಗಳು
ಅಂತರ್ಜಲ	16 ಲಕ್ಷ ಹೆಕ್ಟೇರುಗಳು
ಒಟ್ಟು	**61 ಲಕ್ಷ ಹೆಕ್ಟೇರುಗಳು**

ಇ) ರಾಜ್ಯದ ಜಲ ಸಂಪನ್ಮೂಲ ಇಲಾಖೆಯ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಂದ ಮೇ 2007ರ ಅಂತ್ಯಕ್ಕೆ ಒಟ್ಟು 23.21 ಲಕ್ಷ ಹೆಕ್ಟೇರುಗಳು ಹಾಗೂ ಸಣ್ಣ ನೀರಾವರಿ ಯೋಜನೆಗಳಿಂದ 9.70 ಲಕ್ಷ ಹೆಕ್ಟೇರುಗಳು ಒಟ್ಟು 32.91 ಲಕ್ಷ ಹೆ. ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ.

ಈ) ಶೇಕಡ 43.39 ರಷ್ಟು ಆಗಿರುತ್ತದೆ.

ಊ) 3ನೇ ಸಣ್ಣ ನೀರಾವರಿ ಗಣತಿ 2000–01 ರಂತೆ ಬಾವಿಗಳು ಮತ್ತು ಕೊಳವೆ ಬಾವಿಗಳಿಂದ ಒಟ್ಟು 11,93,132 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ.

ಋ) 3ನೇ ಸಣ್ಣ ನೀರಾವರಿ ಗಣತಿ 2000–01 ರಂತೆ ರಾಜ್ಯದಲ್ಲಿ ಒಟ್ಟು 5,32,380 ಕೊಳವೆ ಬಾವಿಗಳನ್ನು ತೋಡಲಾಗಿದ್ದು, ಈ ಪೈಕಿ 41,293 ಕೊಳವೆ ಬಾವಿಗಳಲ್ಲಿ ನೀರುವ ಕಡಿಮೆಯಾಗಿರುತ್ತದೆ.

ಎ) ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಕೊಳವೆ ಬಾವಿಗಳ ಮರುಪೂರಣಕ್ಕೆ ಇಂಗು ಕೆರೆಗಳ ನಿರ್ಮಾಣವನ್ನು ಕೈಗೊಳ್ಳಲಾಗುತ್ತಿದೆ.

566 (616) ಶ್ರೀ ಪಾಟೀಲ್ ಡಿ.ಆರ್. (ಗದಗ್) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ

1) ಸರ್ಕಾರ ಪ್ರಾರಂಭಿಸಿರುವ ಹಾಗೂ ಅನುಮತಿ ನೀಡಿರುವ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳು ಎಷ್ಟು;

2) ಇದರಲ್ಲಿ ಉತ್ತರ ಕರ್ನಾಟಕ ಹಾಗೂ ಹೈದ್ರಾಬಾದ್ ಕರ್ನಾಟಕದಲ್ಲಿ ಪ್ರಾರಂಭಿಸಿದ ಶಾಲೆ ಕಾಲೇಜುಗಳು ಎಷ್ಟು;

3) ಇದರಲ್ಲಿ ಉತ್ತರ ಕರ್ನಾಟಕ ಹಾಗೂ ಹೈದ್ರಾಬಾದ್ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದು ಭಾವಿಸುವಿರಾ;

4) ಈ ಅನ್ಯಾಯ ಸರಿಪಡಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು;

ಆ) ರಾಜ್ಯದಲ್ಲಿರುವ ಒಟ್ಟು ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಎಷ್ಟು;

1) ಈ ಶಾಲೆಗಳಿಗೆ ಅಗತ್ಯವಾಗಿರುವ ಶಿಕ್ಷಕ ಸಿಬ್ಬಂದಿ ಎಷ್ಟು;

2) ಬೋಧಕೇತರ ಸಿಬ್ಬಂದಿ ಎಷ್ಟು;

3) ಈಗಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಎಷ್ಟು;

4) ಸಿಬ್ಬಂದಿ ಕೊರತೆ ನಿವಾರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು;